

ನೇಪಾಳದ ಖುಮ್‌ಜುಂಗ್ ಹಳ್ಳಿಯಲ್ಲಿ, ಮುದುಕಿಯೊಬ್ಬಳ ಮನೆಯಲ್ಲಿದ್ದ ತಲೆಬುರುಡೆ ಯೇತಿಯದು ಎಂಬ ನಂಬಿಕೆ ಇದೆ

ನಡೆಸುವವರದು ಸಾಹಸ ಜೀವನವೇ ಸರಿ. ಈ ಜನರ ಬದುಕನ್ನು ಅರ್ಥ ಮಾಡಿಕೊಳ್ಳುವುದೇ ಕಠಿಣವಾಗಿರುವಾಗ, ಯೇತಿಗಳ ಅಸ್ತಿತ್ವದ ಕುರಿತು ಸ್ಪಷ್ಟವಾಗಿ ಹೇಳುವುದು ಸುಲಭವೇನಲ್ಲ.

## ಬಗೆಹರಿಯದ ಒಗಟು

ಆಕ್ಸ್‌ಫರ್ಡ್‌ನ ಪ್ರಾಧ್ಯಾಪಕರೊಬ್ಬರು ಯೇತಿಗೆ ಸಂಬಂಧಿಸಿದ್ದೆನ್ನಲಾದ ಕೂದಲು, ಮೂಳೆ, ಉಗುರು, ಮುಂತಾದ ಅವಶೇಷಗಳನ್ನು ಸೋಸಿ ಪರೀಕ್ಷೆಗೆ ಒಳಪಡಿಸಿದ್ದಾರೆ. ಅವರ ಅಧ್ಯಯನದ ಫಲಿತಾಂಶ ಕೂಡ ಇವೆಲ್ಲ ಅವಶೇಷಗಳು ಕರಡಿ ಅಥವಾ ಕುರಿಗೆ ಸಂಬಂಧಿಸಿದವು ಎಂದು ಸೂಚಿಸಿವೆ. ಡಿಎನ್‌ಎ ಅಧ್ಯಯನ ಕೂಡ ಇವೆಲ್ಲ ಹಿಮಕರಡಿಗೆ ಸಂಬಂಧಿಸಿದ್ದವಾಗಿರಬಹುದು. ಆದರೆ, ಇವುಗಳ ಮೂಲಕ ನಮಗೆ ಪರಿಚಿತವಾಗಿರುವ ಪ್ರಾಣಿಯೊಂದನ್ನು ವಿವರಿಸುವುದು ಕಷ್ಟ ಎನ್ನುವ ಕೊಸರನ್ನೂ ಉಳಿಸಿವೆ. ಯೇತಿ ಎನ್ನುವ ಪ್ರಾಣಿಯೊಂದು ನಮ್ಮ ಕಣ್ಣಳತೆಗೆ ದೂರದಲ್ಲೆಲ್ಲೋ ಇರಬಹುದು ಎನ್ನುವ ನಂಬಿಕೆ ಜೀವಂತವಾಗಿರಲು ಇಷ್ಟು ದ್ವಂದ್ವ, ವಿರೋಧಾಭಾಸಗಳು ಸಾಕಲ್ಲ.

ಮನುಷ್ಯನಲ್ಲದ ಹಾಗೂ ಈವರೆಗೆ ನಮಗೆ ಗೊತ್ತಿರುವ ಯಾವ ಪ್ರಾಣಿಯನ್ನೂ ಸ್ಪಷ್ಟವಾಗಿ ಹೋಲದ ಹೆಜ್ಜೆಗುರುತುಗಳ ಕುರಿತು ಸಂಶೋಧನೆಗಳು ಈಗಲೂ ನಡೆಯುತ್ತಿವೆ. ಹಿಮಾಲಯದ ಬೇರೆ ಬೇರೆ ಪ್ರಾಂತ್ಯಗಳಿಂದ ಸಂಗ್ರಹಿಸಿದ ಕೂದಲುಗಳನ್ನು ಅಧ್ಯಯನ ಮಾಡಿರುವ ಬ್ರಿಯಾನ್ ಸೈಕ್ಸ್ ಎನ್ನುವ ಜೆನೆಟಿಸಿಸ್ಟ್, ಎರಡು ಸ್ಯಾಂಪಲ್‌ಗಳನ್ನು ಬಿಟ್ಟರೆ ಉಳಿದವೆಲ್ಲವೂ ನಮಗೆ ಗೊತ್ತಿರುವ ಪ್ರಾಣಿಗಳಿಗೆ ಸೇರಿದ ಕೂದಲುಗಳೇ ಎನ್ನುವ ಅಭಿಪ್ರಾಯಕ್ಕೆ ಬಂದಿದ್ದಾರೆ. 2014ರಲ್ಲಿ ಪ್ರಕಟಗೊಂಡ ಬ್ರಿಯಾನ್‌ರ ಅಧ್ಯಯನ ವರದಿಯಲ್ಲಿ – ಉಳಿದೆರಡು ಕೂದಲುಗಳು ಹಿಮಕರಡಿ ವರ್ಗದ ಪ್ರಾಣಿಗಳಿಗೆ ಸೇರಿದ್ದಾಗಿರಬಹುದಾದರೂ, ಈವರೆಗೆ ನಾವು ಗುರ್ತಿಸಿರುವ ಯಾವ ಜೀವಿಯೊಂದಿಗೂ ಹೊಂದುತ್ತಿಲ್ಲ ಎನ್ನುವ ಅಂಶವಿದೆ. 2017ರಲ್ಲಿ ಪ್ರಕಟಗೊಂಡ ಮತ್ತೊಂದು ಅಧ್ಯಯನ ವರದಿ ನ್ಯೂಯಾರ್ಕ್‌ನ ಸಂಶೋಧಕರಿಗೆ ಸಂಬಂಧಿಸಿದ್ದು. ಅವರು ಕೂಡ ಯೇತಿಗೆ ಸಂಬಂಧಿಸಿದ ಪುರಾವೆಗಳ ಅಧಿಕೃತತೆಯನ್ನು ತಳ್ಳಿಹಾಕಿದ್ದಾರೆ. ಹಾಗಾದರೆ, ಹಿಮಾಲಯದಲ್ಲಿ ಕಂಡುಬಂದ ಹೆಜ್ಜೆಗುರುತುಗಳು ಯಾವ ಪ್ರಾಣಿಯವು? ಈ ಪ್ರಶ್ನೆಗೂ ವಿಜ್ಞಾನಿಗಳು ಉತ್ತರ ಊಹಿಸಿದ್ದಾರೆ. ಮನುಷ್ಯರ ಹೆಜ್ಜೆಗುರುತುಗಳೇ ಹಿಮದ ಕಣ್ಣಾಮುಚ್ಚಾಲೆಯ ಹಾಸಿನಲ್ಲಿ ದೊಡ್ಡದಾಗಿ, ಅಸಹಜವಾಗಿ ಮೂಡಿರಬಹುದೆನ್ನುವುದು ಅವರ ಊಹೆ. ಹಿಮಸವೆತದಿಂದಾಗಿ ಹೆಜ್ಜೆಗಳು ದೊಡ್ಡ ಗಾತ್ರವನ್ನು ಪಡೆದುಕೊಂಡಿರಬಹುದು ಎನ್ನುವ ತರ್ಕವಿದು.

